ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೆ, ಕ್ವೋರಂನಾನ್ ಸ್ಪೇಜ್‌ನಲ್ಲಿ ಎಕ್ಸ್‌ಪ್ಲೇನ್ ಮಾಡಬಹುದೇ ಹೊರತು ಇಂಪ್ಲಿಮೆಂಟೇಷನ್ ಸ್ಪೇಜ್‌ನಲ್ಲಿ ಎಕ್ಸ್‌ಪ್ಲೇನ್ ಮಾಡುವುದಕ್ಕಾಗುವುದಿಲ್ಲ. ನೀವು ಸರ್ಕಾರಕ್ಕೆ ಕಾಂಪ್ಲಿಮೆಂಟ್ ಕೊಡಿ.

SRI D.B. CHANDREGOWDA :— If you are taking it up for consideration, you are free to do it. I will leave it you.

MR. SPEAKER :— We are not taking it for consideration.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಸಿಂಧ್ಯಾರವರು ನಮಗೆ 108 ದಿವಸ ಸಹಕಾರವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದಕ್ಕಾಗಿ ಒಂದು ಸಲ ಅಲ್ಲ, ಎರಡು ಸಲ ಅಲ್ಲ ಮುಖ್ಯಮಂತ್ರಿಗಳು ತಮಗೆ ಧನ್ಯವಾದಗಳನ್ನು ಕೊಟ್ಟಿದ್ದಾರೆ. ಇನ್ನೊಂದು ಸಾರಿ ನಾನು ತಮಗೆ ಧನ್ಯವಾದಗಳನ್ನು ಕೊಡುತ್ತೇನೆ.

ಅಧ್ಯಕ್ಷರು :— ಸರ್ಕಾರದವರು ನಾವೇ ತರುತ್ತೇವೆಂದು ಹೇಳಿದ್ದಾರೆ. ಮತ್ತೆ ಏಕೆ ಎಕ್ಸ್‌ಪ್ಲೇನ್ ಮಾಡುತ್ತೀರಿ?

SRI Mallikharjuna Kharge :— If it is in public interest, we will examine it.

ಶ್ರೀ ಜಗದೀಶ್‌ಶೆಟ್ಟರ್ :— ಹಾಗಾದರೆ ಇದನ್ನು ಪೆಂಡಿಂಗ್‌ನಲ್ಲಿಡಿ.

ಶ್ರೀ ಎಸ್. ಸುರೇಶ್‌ಕುಮಾರ್ :— ಹಾಗಾದರೆ ಈ ಮಸೂದೆಯ ಪರವಾಗಿರುವವರು ಹೌದು ಎನ್ನಬೇಕು ವಿರೋಧವಾಗಿರುವವರು ಇಲ್ಲ ಎಂದು ಹೇಳಬೇಕೆನ್ನುವ ಪದವನ್ನು ಎಕ್ಸ್‌ಪಂಜ್ ಮಾಡುತ್ತೀರಾ?

ಅಧ್ಯಕ್ಷರು :— ನಾನು ಇನ್ನು ಪ್ರೊಸಿಜರ್ ಪ್ರಕಾರ ಪೂರಾ ಮುಗಿಸಿಲ್ಲ. ವಿವರಣೆ ಕೊಡುವುದು ಮತ್ತು ಎಕ್ಸ್‌ಪಂಜ್ ಮಾಡತಕ್ಕ ಪ್ರಶ್ನೆ ಬರುವುದಿಲ್ಲ.

13. ಸಭೆಯ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹನ್ನೊಂದನೇ ವಿಧಾನಸಭೆಯ ಎರಡನೆಯ ಅಧಿವೇಶನದ ಮುಂದುವರೆದ ಉಪವೇಶನಗಳು ದಿನಾಂಕ 23-10-2000ದಿಂದ 31-10-2000ದವರೆಗೆ ಮತ್ತು ದಿನಾಂಕ 7-11-2000ದಿಂದ 25-11-200ದವರೆಗೆ 20 ದಿನಗಳು ಸಮಾವೇಶಗೊಂಡಿದ್ದು ಒಟ್ಟು 115+7 = 122 ಗಂಟೆಗಳ ಕಾಲ ಕಾರ್ಯಕಲಾಪಗಳನ್ನು ನಡೆಸಿರುತ್ತದೆ.

ಅಧಿವೇಶನದ ಪ್ರಾರಂಭದಲ್ಲಿ ಹಾಗಾಡ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಉಪಚುನಾವಣೆಯಲ್ಲಿ ಆಯ್ಕೆಯಾದ ಶ್ರೀ ಬರಮಗೌಡ (ರಾಜು) ಅಲಗೌಡ ಹಾಗೆ ಅವರು ಪ್ರಮಾಣವಚನ ಸ್ವೀಕರಿಸಿದರು.

ವಿಧಾನಸಭೆಯ ಅವಧಿಯಲ್ಲಿ ಇತ್ತೀಚೆಗೆ ನಿಧನರಾದ ಗಣ್ಯ ವ್ಯಕ್ತಿಗಳ ಅಂದರೆ ಶ್ರೀಮಾನ್ ನಿಜಲಿಂಗಪ್ಪನವರು ಹಾಗೂ ಇತರರ ಗೌರವಾರ್ಥ ಸಂತಾಪ ನಿರ್ಣಯಗಳನ್ನು ಮಂಡಿಸಿ ಅಂಗೀಕರಿಸಲಾಗಿದೆ.

ಎರಡನೆಯ ಅಧಿವೇಶನದ ಮುಂದುವರೆದ ಉಪವೇಶನಗಳ ಅವಧಿಯಲ್ಲಿ 2206 ಪ್ರಶ್ನೆಗಳನ್ನು ಮಾನ್ಯ ಸದಸ್ಯರುಗಳಿಂದ ಸ್ವೀಕರಿಸಲಾಗಿದ್ದು, ಆ ಪೈಕಿ 210 ಚುಕ್ಕೆ ಗುರುತಿನ ಪೈಕಿ 189 ಪ್ರಶ್ನೆಗಳಿಗೆ ಹಾಗೂ 1404 ಚುಕ್ಕೆ ರಹಿತ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಲಾಗಿದೆ ಹಾಗೂ 23 ಪ್ರಶ್ನೆಗಳು ತಿರಸ್ಕೃತಗೊಂಡಿವೆ.

ನಿಯಮ 60ರ ಮೇರೆಗೆ 11 ನಿಲುವಳಿ ಸೂಚನೆಗಳನ್ನು ಸ್ವೀಕರಿಸಿದ್ದು, ಮಾನ್ಯ ಸದಸ್ಯರುಗಳಿಗೆ ಪ್ರಾರಂಭಿಕವಾಗಿ ಪ್ರಸ್ತಾಪಿಸಲು ಅವಕಾಶ ನೀಡಿ, ಎರಡು ನಿಲುವಳಿಗಳನ್ನು ನಿಯಮ 69ರ ಅಡಿಯಲ್ಲಿ ಚರ್ಚಿಸಲು ಪರಿವರ್ತಿಸಿ, ಉಳಿದ ಸೂಚನೆಗಳಿಗೆ ಒಪ್ಪಿಗೆಯನ್ನು ನಿರಾಕರಿಸಲಾಯಿತು.

ಒಟ್ಟು 250 ಹಾಗದ ಪತ್ರಗಳನ್ನು ಮತ್ತು ಹತ್ತು ಅರ್ಜಿಗಳನ್ನು ಸಭೆಯ ಮುಂದೆ ಮಂಡಿಸಲಾಗಿರುತ್ತದೆ. ಅಲ್ಲದೆ ಈ ಅವಧಿಯಲ್ಲಿ ವಿಧಾನಮಂಡಲದ, ವಿಧಾನಸಭೆಯ ವಿವಿಧ ಸಮಿತಿಗಳ 10 ವರದಿಗಳನ್ನು ಮಂಡಿಸಲಾಗಿದೆ.

ಒಟ್ಟು 12 ಗಮನ ಸೆಳೆಯುವ ಸೂಚನೆಗಳು ಚರ್ಚೆಯಾಗಿರುತ್ತವೆ. ನಿಯಮ 351ರಡಿಯಲ್ಲಿ 101 ಸೂಚನೆಗಳಿಗೆ ಉತ್ತರಗಳನ್ನು ನೀಡಲಾಗಿದೆ. ನಿಯಮ 69ರಡಿಯಲ್ಲಿ 15 ಸೂಚನೆಗಳನ್ನು ಸ್ವೀಕರಿಸಲಾಗಿದೆ. 5 ಪ್ರಶ್ನೆಗಳಿಗೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ನೀಡಲಾಗಿ ಯಾವುದೇ ಪ್ರಶ್ನೆಯು ಚರ್ಚಿಸಲಿಲ್ಲ.

39 ವಿಷಯಗಳನ್ನು ಶೂನ್ಯ ವೇಳೆಯಲ್ಲಿ ಅವಕಾಶ ಮಾಡಿಕೊಟ್ಟು ಉತ್ತರ ಒದಗಿಸಲಾಗಿದೆ.

ಸದರಿ ಅವಧಿಯಲ್ಲಿ 7 ಹಕ್ಕುಚ್ಯುತಿ ಸೂಚನೆಗಳನ್ನು ಸ್ವೀಕರಿಸಿದ್ದು, 2 ಹಕ್ಕುಚ್ಯುತಿ ಸೂಚನೆಯನ್ನು ಚರ್ಚಿಸಿ, ಉಳಿದ ಸೂಚನೆಗಳಿಗೆ ಒಪ್ಪಿಗೆಯನ್ನು ತಡೆಹಿಡಿಯಲಾಗಿದೆ.

ಈ ಅವಧಿಯಲ್ಲಿ ವಿಧಾನ ಪರಿಷತ್ತಿನ ವಿಧೇಯಕಗಳು ಸೇರಿದಂತೆ ಒಟ್ಟು 19 ವಿಧೇಯಕಗಳನ್ನು ಪರ್ಯಾಲೋಚಿಸಿ, ಅಂಗೀಕರಿಸಲಾಗಿದೆ ಹಾಗೂ ಒಂದು ವಿಧೇಯಕವನ್ನು ಜಂಟಿ ಪರಿಶೀಲನಾ ಸಮಿತಿಗೆ ಒಪ್ಪಿಸಲಾಯಿತು.

ಒಂದು ಅಧಿಕೃತ ನಿರ್ಣಯವನ್ನು ಹಾಗೂ ಖಾಸಗೀ ಸದಸ್ಯರ ಒಂದು ನಿರ್ಣಯವನ್ನು ಮಂಡಿಸಿದ್ದು, ಸದನದಲ್ಲಿ ಚರ್ಚೆಯು ಅಪೂರ್ಣವಾಗಿರುತ್ತದೆ.

2000-2001ನೇ ಸಾಲಿನ ಪೂರಕ ಅಂದಾಜುಗಳನ್ನು (ಮೊದಲನೇ ಕಂತು) ಮಂಡಿಸಿ, ಚರ್ಚಿಸಿ ಅಂಗೀಕರಿಸಲಾಗಿರುತ್ತದೆ.

ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳಲ್ಲಿ ಸಮಿತಿಯ ಅಧಿಕಾರಾವಧಿಯ ನಿಯಮಗಳನ್ನು ತಾತ್ಕಾಲಿಕವಾಗಿ ತಡೆಹಿಡಿದು, ಸದರಿ ಸಮಿತಿಗಳ ಅಧಿಕಾರಾವಧಿಯನ್ನು ದಿನಾಂಕ 25-11-2000 ದಿಂದ 31ನೇ ಮಾರ್ಚ್, 2001ರ ತನಕ ವಿಸ್ತರಿಸಲಾಯಿತು.

ಡಾ: ರಾಜ್‌ಕುಮಾರ್ ಹಾಗೂ ಇತರ ಮೂವರನ್ನು ಕಾಡುಗಳ್ಳ ವೀರಪ್ಪನ್ ಅಪಹರಿಸಿ 108 ದಿನಗಳು ಒತ್ತೆಯಾಟ್ಟಿದ್ದ ವಿಷಯದ ಬಗ್ಗೆ ಚರ್ಚಿಸಿ, ಸರ್ಕಾರದಿಂದ ಉತ್ತರ ನೀಡಲಾಯಿತು. ಹಾಗೂ ಡಾ: ರಾಜ್‌ಕುಮಾರ್ ಬಿಡುಗಡೆಗೆ ನಾನು ಹಾಗೂ ಸದನದ ಸದಸ್ಯರೆಲ್ಲರೂ ಹರ್ಷ ವ್ಯಕ್ತಪಡಿಸಿದರು.

ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ಸುಲಲಿತವಾಗಿ ಸದನ ನಡೆಸಲು ನನ್ನೊಡನೆ ಸಹಕರಿಸಿದ ಸಭಾ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳಿಗೂ, ಸಚಿವ ಸಂಪುಟದ ಸದಸ್ಯರುಗಳಿಗೂ, ವಿರೋಧಪಕ್ಷದ ನಾಯಕರಿಗೂ, ವಿವಿಧ ಪಕ್ಷಗಳ ನಾಯಕರುಗಳಿಗೂ, ವಿಧಾನ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೂ, ಪತ್ರಕರ್ತರಿಗೂ, ಆಕಾಶವಾಣಿ ಮತ್ತು ದೂರದರ್ಶನದ ಮಾಧ್ಯಮಗಳಿಗೂ, ವಿವಿಧ ಇಲಾಖಾ ಅಧಿಕಾರಿಗಳಿಗೂ ಹಾಗೂ ವಿಧಾನಸಭೆ ಸಚಿವಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಎರಡನೆಯ ಒಂದು ವಿಶೇಷವೆಂದರೆ, ಅಧಿವೇಶನ ನಡೆದ 25 ದಿವಸಗಳಲ್ಲಿ ಯಾವುದೇ ಒಂದು ದಿವಸ ಗದ್ದಲವಾಗಿಯಾಗಲಿ ಎಂದು ಸದನವನ್ನು ಅಷ್ಟೂ ಮಾಡಲಿಲ್ಲ. ಇದು ದಾಖಲೆಯೆಂದರೆ, ನಮ್ಮ ಸದಸ್ಯರುಗಳು ಯಾವ ರೀತಿ ಸಹಕರಿಸಿದ್ದಾರೆಂದು ತೋರಿಸುತ್ತದೆ. ಆದಕ್ಕಾಗಿ ತಮಗೆಲ್ಲರಿಗೂ ಮತ್ತೊಮ್ಮೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ಕಾನೂನು ಸಚಿವರು) :— ಮಾನ್ಯ ಅಧ್ಯಕ್ಷರೆ, ಈ ಸಾರಿಯ ಸದನದ ಕಾರ್ಯ ಕಲಾಪಗಳನ್ನು ಬಹಳ ವಿಶೇಷವಾಗಿ ನಾನು ಗುರುತಿಸಿದ್ದು ಕೆಲವು ಹಿರಿಯ ಮತ್ತು ಕಿರಿಯ ಸದಸ್ಯರು ಹೆಚ್ಚು ಆಸಕ್ತಿಯನ್ನು ವಹಿಸಿದ್ದಾರೆ. ಆ ಆಸಕ್ತಿ ಅಭ್ಯಾಸ ಮಾಡಿದ್ ಒಂದು ಕಡೆಯಾದರೆ ಅಂತಹವರಿಂದ ಅನೇಕ ವಿಚಾರಗಳನ್ನು ತಿಳಿದುಕೊಳ್ಳುವುದಕ್ಕೆ ಸಹಾಯಕವಾಯಿತು. ನಾನು ಉತ್ಪ್ರೇಕ್ಷೆಯಿಂದ ಈ ಮಾತನ್ನು ಹೇಳುತ್ತಿಲ್ಲ. ಇತ್ತೀಚಿನ ದಿವಸಗಳಲ್ಲಿ ನಮ್ಮಲ್ಲಿ ಸದನದಲ್ಲಿ ಕೂರುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಅವರಿಗೆ ಅನೇಕ ಕೆಲಸಕಾರ್ಯಗಳು ಇರಬಹುದು. ಆದರೆ ಒಂದು ದಿವಸ ಸಹ ಪ್ರತಿಪಕ್ಷದ ಮುಖಂಡರು ನಮ್ಮ ಸಂಖ್ಯೆಯನ್ನು ಪ್ರಶ್ನೆ ಮಾಡುವುದಾಗಲೀ ಮಾನ್ಯ ಮಂತ್ರಿಮಿತ್ರರು ಬಾರದಿರುವುದನ್ನು ಗುರುತಿಸುವಂತಹ ಕೆಲಸ ಈ ಸಾರಿ ಆಗಲಿಲ್ಲ. ಅದೊಂದು ನಾನು ವಿಶೇಷವಾಗಿ ಗಮನಿಸಿದ್ದು ಅದಕ್ಕಾಗಿ ನಾನು ವಿಶೇಷವಾದ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ.

ಶ್ರೀ ಎಸ್. ಸುರೇಶ್‌ಕುಮಾರ್ :— ಮುಂದಿನ ಸಾರಿ ತಿದ್ದಿಕೊಳ್ಳುತ್ತೇವೆ.

6.50 ಪಿ.ಎಂ.

ಶ್ರೀ ಡಿ.ಬಿ. ಚಂದ್ರೇಗೌಡ :— ನನಗೆ ಒಬ್ಬರ ಹೆಸರನ್ನು ಪ್ರಸ್ತಾಪ ಮಾಡಬೇಕೆಂದು ಆಸಕ್ತಿ ಇದೆ. ಆದರೆ ಅದು ಸರಿಯಲ್ಲವೆಂದು ಸುಮ್ಮನಾಗುತ್ತೇನೆ, ಅಷ್ಟೆ. ಅವರಿಗೆ ವಿಶೇಷ ಅಭಿನಂದನೆಗಳನ್ನು ನಾನು ಸಲ್ಲಿಸುತ್ತೇನೆ. ನಾಲ್ಕೈದು ಜನ ವಿಶೇಷವಾಗಿ ನಾವು ಆ ಕಾಲದಲ್ಲಿ ಮಾಡುತ್ತಿದ್ದೆವು. ಇತ್ತೀಚೆಗೆ ಆ ಕೆಲಸ ಮಾಡುವುದು ಬಹಳ ಕಡಿಮೆಯಾಗಿದೆ.

ಅಧ್ಯಕ್ಷರು :— ಅದರಲ್ಲೂ ಈ ಸಲ ಧೈತರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಮಾತನಾಡಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಆದ್ದರಿಂದ ನಾನು ಮಾನ್ಯ ಅಧ್ಯಕ್ಷರ ಮೇಲೆ ಒಂದು ಆಪಾದನೆ ಮಾಡಬೇಕೆಂದು ಇದ್ದೇನೆ. ಸ್ವಲ್ಪ ಅವರು ಬಲಗಡೆಗಿಂತ ಎಡಗಡೆಗೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಾರೆ. ಕೊಡಬೇಕು. ನಾನೂ ಹಾಗೆ ಮಾಡುತ್ತಿದ್ದೆ.

ಅಧ್ಯಕ್ಷರು :— ನಾನು ಎರಡೂ ಕಡೆಯಲ್ಲಿ ನೋಡಬೇಕಲ್ಲ?

ಶ್ರೀ ಡಿ.ಬಿ. ಚಂದ್ರೇಗೌಡ :— ಸಂಸದೀಯ ನಡವಳಿಯಲ್ಲಿ ಅದು ಸರಿಯಾದದ್ದು. ಹಾಗೇನೆ ನೀವು ಸ್ವಲ್ಪ ಹೆಚ್ಚು ರೂರಲ್‌ಗೆ ವೇಟೇಜ್‌ನ್ನು ಈ ಸಾರಿ ಕೊಟ್ಟಿದ್ದೀರಿ. ನಾವು ಅಂಕಿಸಂಖ್ಯೆಗಳನ್ನು ಕೊಡುವ ಪ್ರಯತ್ನ ಮಾಡುತ್ತಿದ್ದೆವು. ಆದರೆ ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕಂಥ ಸದಸ್ಯರುಗಳೇ ಹೆಚ್ಚು ಸಂಖ್ಯೆಯಲ್ಲಿ ಇಲ್ಲಿ ಪಾಲುದಾರರಾಗಿದ್ದಾರೆ ಎಂಬುದು

ವಿಶೇಷ. ಅದಕ್ಕಾಗಿ ಮಾನ್ಯ ವಿರೋಧಪಕ್ಷದ ನಾಯಕರಿಗೆ, ಮುಂದಿನ ಸಾಲಿನಲ್ಲಿ ಕುಳಿತಿರತಕ್ಕಂಥ ಹಿರಿಯ ಮಿತ್ರರು, ಸನ್ಮಾನ್ಯ ಪಿ.ಜಿ.ಆರ್. ಸಿಂಧ್ಯ, ಸೋಮಶೇಖರ್, ಭೈರೇಗೌಡರು ಹೀಗೆ ಎಲ್ಲರೂ ನನ್ನ ಮಿತ್ರರು, ಒಟ್ಟಿಗೆ ಇಲ್ಲಿ ಕೆಲಸ ಮಾಡಿದಂಥವರು. ಬೇರೆ ಬೇರೆಯಾಗಿ ಕೆಲಸ ಮಾಡಿದವರು, ಮೇಲೆ ಕೆಳಗೆ ಕುಳಿತು ಕೆಲಸ ಮಾಡಿದಂಥವರು. ಆದ್ದರಿಂದ ಈ ಎಲ್ಲ ಸದಸ್ಯರಿಗೆ ನಾನು ಸರ್ಕಾರದ ಪರವಿಯಿಂದ, ತಾವು ಪ್ರಸ್ತಾಪ ಮಾಡಿರತಕ್ಕಂಥ ಮಸೂದೆಗಳನ್ನು ಅಂಗೀಕರಿಸುವಲ್ಲಿ 'ವೈಶಿಷ್ಟಪೂರ್ಣ' ಇದಕ್ಕೆ ವಿಶೇಷವಾಗಿ ಒತ್ತು ಕೊಡಬೇಕು. ಒಟ್ಟು ಹತ್ತು ಮಸೂದೆಗಳನ್ನು ಸ್ವಾಗತಿಸಿದ್ದೇವೆ ನನ್ನ 30 ವರ್ಷಗಳ ಸಂಸದೀಯ ಜೀವನದಲ್ಲಿ ಇದು ಒಂದು ವಿಶೇಷದ, ಅಪರೂಪದ ಸಂದರ್ಭವೆಂದು ಹೇಳಿ ನಾನು ಅವರಿಗೆ ವಿಶೇಷವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮತ್ತೆ ನಾವು ಕೂಡ ಅಭಿನಂದನೆಗೆ ಪಾತ್ರರೇ. ಕಾರಣ ಏನು ಎಂದರೆ ವಿಧಾನಸಭೆಯಲ್ಲಿ ಪ್ರತಿಪಕ್ಷಗಳ ಬೇಡಿಕೆಯನ್ನು ಮಾನ್ಯ ಮಾಡಿದಂಥ ಪ್ರಕರಣಗಳು, ಪ್ರಸಂಗಗಳು ಬಹಳ ಕಡಿಮೆ. ಈ ಸಾರಿ ಯಾವ ಶಾಸನವನ್ನು ನಮಗೆ ಸರಿಹಾಣಿಸುವುದಿಲ್ಲವೆಂದು ಹೇಳಿದರು ಅಂತಹ ಶಾಸನವನ್ನು, ವಿಶೇಷವಾಗಿ ಸಹಕಾರ ಸಂಘಗಳಿದ್ದು, ನಾವು ಅದನ್ನು ಮಂಡನೆ ಮಾಡುವುದಕ್ಕೆ ಕೂಡ ಪ್ರಯತ್ನ ಮಾಡಲಿಲ್ಲ. ಇದು ಸರ್ಕಾರದ ಸೌಜನ್ಯ ಅಂತಾದರೂ ತಿಳಿದುಕೊಳ್ಳಿ, ನಾವು ನಿಮ್ಮನ್ನು ಮೆಚ್ಚಿಕೊಂಡಿದ್ದೇವೆ ಅಂತಾದರೂ ತಿಳಿದುಕೊಳ್ಳಿ, ಇದ್ದು ಒಂದು ಒಳ್ಳೆಯ ಸಂಪ್ರದಾಯವನ್ನು ನಾವು ಹಾಕಿಕೊಟ್ಟಿದ್ದೇವೆ. ಹಾಗೆಯೇ ವಿಶ್ವವಿದ್ಯಾನಿಲಯ ಮಸೂದೆಯನ್ನು ತಂದಾಗ ಇದಕ್ಕೆ ಹೆಚ್ಚು ಬೆಳಕನ್ನು ಚೆಲ್ಲಬೇಕು, ಅವಸರವಸರವಾಗಿ ಪ್ರಸ್ತಾಪ ಮಾಡಬೇಡಿ, ಬುದ್ಧಿಜೀವಿಗಳೊಡನೆ ನಾವು ಡೀಲಿಂಗ್ ಮಾಡುತ್ತಿದ್ದೇವೆ ಎನ್ನುವಂಥ ಮಾತನ್ನು ರಾಮದಾಸ್ ಮತ್ತು ಅನೇಕ ಮಿತ್ರರು ಹೇಳಿದ್ದರು. ಅದನ್ನು ಸಂತೋಷದಿಂದ ಒಪ್ಪಿಕೊಂಡಿದ್ದಕ್ಕೆ, ತಾವು ಆ ಮಸೂದೆಯನ್ನು ಕೂಡ ಜಂಟಿ ಸಲಹಾ ಸಮಿತಿಗೆ ಕಳಿಸಿಕೊಟ್ಟಿದ್ದೀರಿ. ಹೀಗೆ ಎಲ್ಲ ದೃಷ್ಟಿಯಿಂದ ಒಂದು ವೈಶಿಷ್ಟ್ಯ ಪೂರ್ಣವಾದಂಥ ಸಮಾವೇಶ ಕೆಲವು ದಿವಸಗಳ ಕಾಲ ನಡೆದರೂ ಕೂಡ, ವಿಶೇಷವಾದ ಶಾಸನಗಳನ್ನು ಕೂಡ ಮಾಡುವುದಕ್ಕೆ ಸಹಾಯ ಮಾಡಿದ್ದರಿಂದ ಪ್ರತಿಪಕ್ಷಗಳನ್ನು, ನಮ್ಮ ಸದಸ್ಯರುಗಳನ್ನು, ತಮ್ಮನ್ನು ನಾನು ಈ ಮೂಲಕ ಅಭಿನಂದಿಸುತ್ತೇನೆ. ನಮಸ್ಕಾರ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೇ, ಕಳೆದ ಒಂದು ತಿಂಗಳಿಂದ ಈ ಸದನ ನಡೆಯುತ್ತಿದ್ದು ಇವತ್ತು ಕೊನೆಯ ಹಂತದಲ್ಲಿ ನಾವು ಇದ್ದೇವೆ. ತಾವು ಅಧ್ಯಕ್ಷರಾಗಿ ಯಶಸ್ವಿಯಾಗಿ ಈ ಸದನದಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ನಡೆಸುಕೊಂಡು ಹೋಗಿದ್ದೀರಿ. ಅದಕ್ಕಾಗಿ ಮೊಟ್ಟಮೊದಲು ತಮ್ಮನ್ನು ನಾನು ಅಭಿನಂದಿಸುತ್ತೇನೆ.

ಅಧ್ಯಕ್ಷರು :— ಕೆಲವು ಸಲ ನಾವು ಕೋಪ ಮಾಡಿಕೊಂಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ :— ಅದು ಕೆಲವು ಸಲ ಆಗುತ್ತದೆ. ಪ್ರಾಸಂಗಿಕವಾಗಿ, ಸಾಂದರ್ಭಿಕವಾಗಿ ಕೆಲವು ಸಲ ಹಾಗೆ ಆಗುತ್ತದೆ ಮತ್ತು ಅದಕ್ಕೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು :— ತಮಗೆ ಏನಾದರೂ ನಾನು ಮನಸ್ಸು ನೋಯಿಸಿದ್ದರೆ ಕ್ಷಮಿಸಿ.

ಶ್ರೀ ಡಿ.ವಿ. :— ಸದಾನಂದಗೌಡ ನಮ್ಮೊಳಿನಲ್ಲಿ ಬಲಮುರಿ, ಎಡಮುರಿ ಗಣಪತಿ ಅಂತ ಇದೆ. ಸಾಧಾರಣವಾಗಿ ಮೇಲಿನ ಸ್ಥಾನದಲ್ಲಿ ಬಿಳಿತವರೆಲ್ಲ ಎಡಮುರಿ ಗಣಪತಿಯನ್ನು ಪ್ರೀತಿಸುವುದು, ಅಕಡೆ ಅವರಿಗೆ ಸ್ವಲ್ಪ ಒಲವು ಜಾಸ್ತಿ. ತಮ್ಮ ಒಲವು ಕೂಡ ಈ ಕಡೆಗೆ ಸ್ವಲ್ಪ ಜಾಸ್ತಿಯಾಗಬೇಕು.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಚಂದ್ರೇಗೌಡರು, ಅಧ್ಯಕ್ಷರು ಈ ಕಡೆ ಒಲವು ತಳೆದಿದ್ದಾರೆ ಎಂದು ಹೇಳಿದರು. ನಿಜವಾಗಿ ಇದೊಂದು ಜನತಾಂತ್ರಿಕ ವ್ಯವಸ್ಥೆಯಲ್ಲಿ, ಈ ಸದನದ ವ್ಯವಸ್ಥೆಯಲ್ಲಿ ಅಧ್ಯಕ್ಷರಾದಂಥವರು ಸ್ವಲ್ಪ ಲಕ್ಷ್ಮಣನ್ನು ಈ ಕಡೆಗೆ ಕೊಡುವಂಥಾದ್ದು ಆಗುತ್ತದೆ. ಏಕೆಂದರೆ ನಮ್ಮ ರಕ್ಷಣೆ ಮಾಡುವವರೇ ನೀವು. ಹೀಗಾಗಿ ಚಂದ್ರೇಗೌಡರು ಹೇಳಿದ್ದರಲ್ಲಿ ತಪ್ಪೇನೂ ಇಲ್ಲ, ನೀವು ಸರಿಯಾಗಿ ಲೆಖಾಜೋಖಾ ಮಾಡುತ್ತಿದ್ದೀರಿ. ಇದು ಮುಂದುವರೆಯಲಿ ಎಂಬುದು ನಮ್ಮ ಆಸೆ. ಮತ್ತೊಂದು ವಿಷಯವೆಂದರೆ ನಾವು ವಿರೋಧಪಕ್ಷದಲ್ಲಿರುವವರು ಸರ್ಕಾರದ ಕೆಲಸಕಾರ್ಯಗಳನ್ನು ಬಹಳ ಕಣ್ಣಲ್ಲಿ, ಕಣ್ಣಿನಲ್ಲಿ ನೋಡುವುದನ್ನು ನಾವು ಮಾಡಬೇಕಾಗುತ್ತದೆ. ಆಮೇಲೆ ವಿರೋಧ ಮಾಡುವ ಸಲುವಾಗಿ ವಿರೋಧ ಅಂತ ಅಲ್ಲ. ನಾನು ಪ್ರಥಮ ಅಧಿವೇಶನದಲ್ಲೇ ಹೇಳಿದ್ದೆ, ಏಕೆಂದರೆ ರಚನಾತ್ಮಕವಾದ ಟೀಕೆಟಿಪ್ಪಣಿಗಳು ಇರಬೇಕು ಮತ್ತು ಯಾವುದೇ ಸಂದರ್ಭದಲ್ಲಿ ಒಳ್ಳೆಯ ಕೆಲಸ ಮಾಡಿದಾಗ ಅಭಿನಂದನೆ ಹೇಳುವಂಥಾದ್ದು ಕೂಡ ನಮ್ಮ ಕಡೆಯಿಂದ ಆಗಬೇಕು ಎಂದು. ಈ ದಿಸೆಯಲ್ಲಿ ಇಲ್ಲಿ, ಉದಾಹರಣೆಗೆ ಹೇಳುವುದಾದರೆ ಹತ್ತು ಬಿಲ್ಲಿಗಳನ್ನು ನಾವು ಸ್ವಾಗತಿಸಿದ್ದೇವೆ. ಯಾವುದೇ ಒಂದು ತಂತ್ರಿಕತಾಂಶ ಇಲ್ಲದೆ ನಾವು ಅವುಗಳನ್ನು ಸ್ವಾಗತಮಾಡಿದ್ದೇವೆ. ಆದರಲ್ಲಿ ಲೋಪದೋಷಗಳನ್ನು ಹುಡುಕಿಕೊಂಡು ಅದನ್ನು ದೊಡ್ಡ ರಾದ್ಧಾಂತ ಮಾಡುವುದನ್ನು ನಾವು ಮಾಡಲಿಲ್ಲ. ಹೀಗಾಗಿ ಇಲ್ಲಿ ರಚನಾತ್ಮಕವಾದ ಸಹಕಾರವನ್ನು ಬೇರೆ ಬೇರೆ ಇಶ್ಯೂಗಳು ಬಂದಾಗ ನಾವು ಕೊಟ್ಟಿದ್ದೇವೆ. ಅದು ಡಾ: ರಾಜಕುಮಾರ್ ಅವರ ಅಪಹರಣದ ವಿಷಯ ಇರಬಹುದು ಮತ್ತು ಬೇರೆ ಬೇರೆ ಗ್ರಾಮೀಣ ಕೃಪಾಂಕ ಇರಬಹುದು, ಮುಖ್ಯಮಂತ್ರಿಗಳು ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡರು ಮತ್ತು ನಾವು ಕೂಡ ಎಲ್ಲ ಸಂದರ್ಭಗಳಲ್ಲಿ ಸಹಕಾರ ಕೊಟ್ಟುಕೊಂಡು ಬಂದಿದ್ದೇವೆ.

ಹೀಗಾಗಿ ಕೊನೆಯಹಂತದಲ್ಲಿರುವ ಜನರ ಕಲ್ಯಾಣ ನಮ್ಮ ಉದ್ದೇಶ. ಕೊನೆಯ ಹಂತದಲ್ಲಿ ಯಾರು ಜನಸಾಮಾನ್ಯರು ಇರುತ್ತಾರೆ, ರೈತರು ಇರುತ್ತಾರೆ, ದಲಿತರು ಇರುತ್ತಾರೆ, ಅವರ ಹಿತಾಸಕ್ತಿಗಳ ಸಲುವಾಗಿ ಈ ಸದನದಲ್ಲಿ ಚರ್ಚೆಯಾಗಬೇಕು. ಅದಕ್ಕಾಗಿ ಇವತ್ತು ರೈತರ ಉತ್ಪನ್ನಗಳ ಬೆಲೆ ಕುಸಿತವಾದಂಥ ಸಂದರ್ಭದಲ್ಲಿ ಇದಕ್ಕೆ ನಾವು ಹೆಚ್ಚು ಒತ್ತು ಕೊಟ್ಟಿರಬೇಕಾಗಿದ್ದು ಮತ್ತು ಇದಕ್ಕೆ ಸರ್ಕಾರದವರು ಕೂಡ ಸ್ಪಂದನ ಮಾಡಿದ್ದು ಬಹಳ ಮುಖ್ಯ. ಇಂತಹ ಚರ್ಚೆಗಳಲ್ಲಿ ನಾವೆಲ್ಲರೂ ಕೂಡಿಕೊಂಡು ಭಾಗವಹಿಸಿದ್ದು, ಇದೊಂದು ಪರಸ್ಪರ ರಚನಾತ್ಮಕವಾದಂಥ ಸಹಕಾರವೆಂದು ನಾನು ಇಲ್ಲಿ ಹೇಳುತ್ತಿದ್ದೇನೆ. ಇವತ್ತು ಈ ಮುಂದುವರೆದ ಅಧಿವೇಶನದಲ್ಲಿ ಹೊಸಬರು ಸಾಕಷ್ಟು ಜನ ಬಂದಿದ್ದಾರೆ. ಆದರೆ ಪ್ರಶ್ನೋತ್ತರ ವೇಳೆ ಇರಬಹುದು, ಶೂನ್ಯವೇಳೆ ಇರಬಹುದು ಬೇರೆ ಬೇರೆ ಹಂತದಲ್ಲಿ ಸಾಮಾನ್ಯವಾದಂಥ ಚರ್ಚೆಯಾದಂಥ ಸಂದರ್ಭದಲ್ಲಿ ಶಾಸಕರ ಭಾಗವಹಿಸುವಿಕೆ ಬಹಳ ಜಾಸ್ತಿ ಇದೆ. ನಾನು ಕಳೆದ ಒಂದು ಅವಧಿಯಿಂದ ನೋಡಿದ್ದೇನೆ. ಯಾವುದೇ ಚರ್ಚೆಯಾದಂಥ ಸಂದರ್ಭದಲ್ಲಿ ಸದಸ್ಯರ ಭಾಗವಹಿಸುವಿಕೆ ಹೆಚ್ಚಾಗಿದೆ. ಹೀಗಾಗಿ ಬಹಳಷ್ಟು ಚಿಂತನಮಂಥನ ಆಗಿದೆ. ಹಾಗೆಯೇ ಹಲವಾರು ಲ್ಯಾಪ್ಸುಗಳೂ ಆಗಿವೆ. ಇವತ್ತು ಪ್ರಶ್ನೆಗಳಿಗೆ ಉತ್ತರ ಸಿಗುವುದಿಲ್ಲ, ಅನ್‌ಸ್ಟಾರ್ಡ್ ಆದ ಪ್ರಶ್ನೆಗಳಿಗೆ ಅರು ತಿಂಗಳಾದರೂ ಉತ್ತರ ಸಿಗುವುದಿಲ್ಲ. ಅವುಗಳಿಗೆ ತಕ್ಷಣ ಉತ್ತರ ಸಿಗುವಂಥಾದ್ದು ಆಗಬೇಕು. ಇದನ್ನು ಮುಂದೆ ಬರುವಂಥ ಅಧಿವೇಶನಗಳಲ್ಲಿ ಸರಿಪಡಿಸಬೇಕೆಂದು ಹೇಳುತ್ತೇನೆ. ಅಂತೆಯೇ ಇನ್ನೂ ಪರಿಣಾಮಕಾರಿಯಾಗಿ ಶಾಸಕರು ಚರ್ಚೆಯಲ್ಲಿ ಭಾಗವಹಿಸತಕ್ಕದ್ದು ಆಗಬೇಕು. ಮತ್ತು ಆ ಕಡೆ ಇರಬಹುದು, ಈ ಕಡೆ ಇರಬಹುದು ಅಟೆಂಡೆನ್ಸ್ ಇನ್ನೂ ಜಾಸ್ತಿಯಾಗಬೇಕು. ಶಾಸಕರು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಇಲ್ಲಿ ಕುಳಿತಿದ್ದು ಕಾರ್ಯಕಲಾಪಗಳನ್ನು ವೀಕ್ಷಿಸಿ ಅದರಲ್ಲಿ ಭಾಗವಹಿಸುವಂತಾಗಬೇಕು ಎಂಬುದು ನನ್ನ ಅಭಿಪ್ರಾಯ ಇದೆ. ನಾನು ಕೊನೆಯದಾಗಿ ಹೇಳುವಂಥಾದ್ದು ಏನೆಂದರೆ ಮಾನ್ಯ ಚಂದ್ರೇಗೌಡರು ಹಿಂದಿನಿಂದಲೂ ಹೇಳಿಕೊಂಡು ಬಂದರು, ಹೊರು ದಿವಸಗಳ ಕಾಲ ಅಧಿವೇಶನ ನಡೆಸುತ್ತೇವೆ ಎಂದು. ಅದು ಒಂದು ವರ್ಷ ಕೂಡ ಸಾಧ್ಯವಾಗಿಲ್ಲ. ಮುಂದಿನ ವರ್ಷದಲ್ಲಾದರೂ ನೂರು ದಿವಸಗಳ ಅಧಿವೇಶನ ಆದರೆ ಬಹುಶಃ ಇನ್ನೂ ಹೆಚ್ಚಾಗಿ ಸಾರ್ವಜನಿಕ ವಿಷಯಗಳ ಬಗ್ಗೆ ಚರ್ಚೆಯಾಗಬಹುದಾಗಿತ್ತು. ಈ ರೈತರ ಉತ್ಪನ್ನಗಳ ಬೆಲೆ ಕುಸಿತದ ಸಂದರ್ಭದಲ್ಲಿ, ಪಬ್ಲಿಸಿಟಿ ಇದರ ಸಲುವಾಗಿ ಒಂದು ವಿಶೇಷ ಅಧಿವೇಶನವನ್ನು ಮೂರು ನಾಲ್ಕು ದಿವಸಗಳ ಕಾಲ ಕರೆದು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಇದರ ಸಲುವಾಗಿ ಚರ್ಚೆ ಮಾಡುವಂಥಾದ್ದು ಆಗಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ :— ಈಗ 50 ಪರ್ಸೆಂಟಿಗೆ ಬಂದಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ :— ಹೀಗಾಗಿ ಕೆಲವೊಂದು ಸಾರ್ವಜನಿಕ ಮಹತ್ವದ ವಿಷಯಗಳ ಬಗ್ಗೆ, ಮುಖ್ಯವಾಗಿ ಡಬ್ಲ್ಯೂಟಿಒ ತೊಂದರೆಗಳ ಮೇಲೆ ಒಂದು ವಿಶೇಷವಾದಂಥ ಅಧಿವೇಶನವನ್ನು ತಾವು ಕರೆದರೆ, ಬಹುಶ: ಮೂರು-ನಾಲ್ಕು ದಿವಸ ಅದರ ಬಗ್ಗೆ ಚಿಂತನೆ ಮಾಡಿದರೆ. ಇನ್ನೂ ಹೆಚ್ಚು ಬೆಳಕನ್ನು ಚೆಲ್ಲುವುದಕ್ಕೆ ಸಾಧ್ಯವಿದೆ ಮತ್ತು ನಾವು ರೈತರಿಗೆ ಹೆಚ್ಚು ಅನುಕೂಲ ಮಾಡುವುದಕ್ಕೆ ಸಾಧ್ಯವಿದೆಯೆಂದು ಹೇಳುತ್ತೇನೆ. ಮುಂದೆ ಬರುವ ದಿವಸಗಳಲ್ಲಿ ನೂರು ದಿವಸ ಅಧಿವೇಶನ ನಡೆಸುವುದಾಗಿ ಹೇಳಿ ಏನು ಕೊಟ್ಟಿದ್ದೀರಿ, ಅದು ಅಚರಣೆಗೆ ಬರುವಂತಾದರೆ ಬಹಳ ಒಳ್ಳೆಯದು. ಕೊನೆಯದಾಗಿ ಆ ಕಡೆಯಿಂದ ಎಲ್ಲರಿಗೂ, ಮುಖ್ಯಮಂತ್ರಿಗಳು ಇರಬಹುದು, ಮಂತ್ರಿಗಳು ಇರಬಹುದು, ಹಿರಿಯರು ಅನುಭವಸ್ಥ ಸದಸ್ಯರುಗಳಿಗೆ ಮತ್ತು ಈ ಕಡೆ ಪ್ರತಿ ಪಕ್ಷದ ಎಲ್ಲ ನಾಯಕರು ಮತ್ತು ಶಾಸಕರುಗಳಿಗೆ, ಹಾಗೂ ತಮಗೂ ಮತ್ತೊಮ್ಮೆ ನಾನು ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಮಸ್ಕಿ) :— ಮಾನ್ಯ ಅಧ್ಯಕ್ಷರೇ, ಮೊದಲಿಗೆಯಾಗಿ ತಮಗೆ ನಾನು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅನೇಕ ಸಂದರ್ಭಗಳಲ್ಲಿ ಸರ್ಕಾರದ ಮೇಲೆ ನಾವು ಕೋಪವನ್ನು ತೋರಿಸುವುದಕ್ಕೆ ಆಗುವುದಿಲ್ಲ. ಆದುದ್ದಾಗಿ ನಾವು ಅಧ್ಯಕ್ಷರ ಮೇಲೆ ನಮ್ಮ ಕೋಪವನ್ನು ತೋರಿಸಿದ್ದುಂಟು. ಹೀಗಾಗಿ ನಮ್ಮ ಕೋಪವನ್ನು ಅಧ್ಯಕ್ಷರ ಮೇಲೆ, ತಮ್ಮ ಮೇಲೆ ತೋರಿಸಿದ್ದುಂಟು. ಬೇರೆ ಬೇರೆ ಅಸ್ತ್ರಗಳು ಸರ್ಕಾರದ ಹತ್ತಿರ ಇರುತ್ತವೆ. ಆ ಅಸ್ತ್ರಗಳನ್ನು ನಮ್ಮ ಮೇಲೆ ಪ್ರಯೋಗಿಸುತ್ತಾರೆ ಎನ್ನುವಂಥ ಭಯದಿಂದ ಅಧ್ಯಕ್ಷರ ಮೇಲೆ ಕೋಪವನ್ನು ಇಟ್ಟಿಲ್ಲ ನಾವು ಮಾಡಿದ್ದೇವೆ. ನಾವು ಇವುಗಳನ್ನೆಲ್ಲ ಮನಸ್ಸಿಗೆ ಹಚ್ಚಿಕೊಳ್ಳದೆ ಪರಿಗಣಿಸುವುದು ಜನಗಳಿಗೆ ತಮ್ಮ ಮೇಲೆ ಬಹಳ ಸಂತೋಷ ಮತ್ತು ಅಭಿಮಾನವನ್ನು ಉಂಟುಮಾಡಿದೆ. ತಮ್ಮ ಬಗ್ಗೆ ಜನಗಳಿಗೆ ಇದ್ದಂಥ ಗೌರವ ಇನ್ನೂ ಹೆಚ್ಚಾಯಿತು. ಕಾರಣ ಏನೆಂದರೆ ಜನರು ಇವನ್ನು ತೀರ್ಮಾನಿಸುವ ಅವಶ್ಯಕತೆ ಇದೆ. ನಾನು ಒಂದು ದಿವಸ ಬಹಳ ಕೋಪ ಮಾಡಿಕೊಂಡು ಎದ್ದಿದ್ದ ಹೋಗಿದ್ದೆ. ತಾವು ಬೆಳಿಗ್ಗೆ ಅರೂಮೂಲ್ಯಾಲು ಗಂಟೆಗೆ ದೂರವಾಣಿ ಮೂಲಕ ಮಾತಾಡಿ 'ಏನು ಸಿಂಧ್ಯರವರೇ, ಹೇಗಿದ್ದೀರಾ, ಏಕೆ ಕೋಪ ಮಾಡಿಕೊಂಡಿರಿ' ಎಂದು ಕೇಳಿದಾಗ ನಾನು ಬಹಳ ಸಣ್ಣವನಾದೆ, ತಾವು ಬಹಳ ಎತ್ತರಕ್ಕೆ ಬೆಳೆದು ದೊಡ್ಡವರಾದಿರಿ ಎನ್ನುವುದನ್ನು ನಾವು ಮನಸಾರೆ ಸ್ಮರಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ಏನೇ ಆಗಲಿ, ಮಾನ್ಯ ಮಂತ್ರಿಗಳು ಹೇಳಿದಂತೆ ಆಗಲಿ. ಅದೇನೆ ಆಗಲಿ ಎಷ್ಟರ ಮಟ್ಟಿಗೆ ತಾವು ಹೆಚ್ಚು ಪುರಸ್ಕಾರ ಕೊಟ್ಟಿದ್ದೀರಾ. ಹೊರಹೋದ, ಎರಡನೇ ಹಾಗೂ ಮೂರನೇ ಸಾಲಿನಲ್ಲಿ ಕುಳಿತಿರುವಂಥವರ ಬಗ್ಗೆಯೂ ನಮಗೆ ಅಭಿಮಾನ, ಗೌರವವಿದೆ. ನಾವು ವಿಮ್ಸ್‌ನಂಥ ನಿರೀಕ್ಷಕರನ್ನು ಇವರು ಯಾರಿಂದ ನಿರೀಕ್ಷಿಸಬೇಕು? ಜನಗಳಾಡಿಕೊಳ್ಳೂ ನಿಮ್ಮ ಪಕ್ಷದವರೇ ಅಪಹಾಸ್ಯ. ಇಷ್ಟೊತ್ತು ಅಧಿವೇಶನದ ಕೊನೆಯ ದಿವಸವಾಗಿದ್ದು ಅವರೆಲ್ಲರೂ ಹಾ: ಹಾ ಅಂತಿದ್ದಾರೆ' ಅವರಿಗೆ ಏನಾಗುತ್ತದೆ? ಇದರ ಒಳ್ಳೆಯದರಲ್ಲಿ ಅಧಿವೇಶನ

ನಡೆಯುತ್ತದೆಯೇ? ಇಲ್ಲವೇ? ಎಂಬ ಆತಂಕದಿಂದ ನಾವೆಲ್ಲರೂ ಇಲ್ಲಿ ಸೇರಿದ್ದೆವು. ಈಗ ರಾಜೀವಾಮಾಲೆರವರು ಬಡುಗಡೆಗೊಂಡಿರುವುದರಿಂದ ನಿರಾಳದಿಂದ ಅಧಿವೇಶನ ಮುಗಿಸಿ ನಾವೆಲ್ಲರೂ ಹೋಗುತ್ತಿದ್ದೇವೆ. ಅಧಿವೇಶನದ ಸಮಯದಲ್ಲಿ ಅನೇಕ ವಿಚಾರಗಳಿಗೆ ಸಂಬಂಧಿಸಿದಂತೆ ಸರ್ಕಾರ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡಿದೆ. ಇದಕ್ಕೆ ಸಾಕ್ಷಿಯಾಗಿ 2000 ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಪರಿಶೀಲನೆಗಾಗಿ ಜಂಟಿ ಸದನ ಸಮಿತಿಗೆ ವಹಿಸಿರುವುದಾಗಿದೆ. ಮತ್ತೊಂದು ವಿಶೇಷವಾದ ವಿಚಾರವೆಂದರೆ, ಸದನದ ಹೊರಗಡೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಸಹಕಾರಿ ರಂಗದ ಬಗ್ಗೆ ಚರ್ಚೆಯಾಗಬೇಕೆಂದು ಹೇಳಿರುವುದರಿಂದ ಇದರ ಬಗ್ಗೆ ಚರ್ಚೆಯಾಗಲಿ. ನಾವು ಅಧಿಕಾರದಲ್ಲಿದ್ದಾಗ ಸಹಕಾರಿ ಕ್ಷೇತ್ರದಲ್ಲಿ ನಾವು ಮಾಡಿರುವುದೆಲ್ಲವೂ ಸರಿಯೆಂದು ಹೇಳುವುದಿಲ್ಲ. ಸಹಕಾರಿಗಳ ಮೂಲವನ್ನು ಹುಡುಕುವುದಾಗುವುದಿಲ್ಲವೆಂಬುದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಸಹಕಾರಿ ಕ್ಷೇತ್ರದಲ್ಲಿ ಸಾಮಾಜಿಕ ನ್ಯಾಯದ ಅವಶ್ಯಕತೆ ಬಹಳ ಇದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಮಂಡಿಸಿರುವ ಅನೇಕ ಮಸೂದೆಗಳನ್ನು ಸ್ವಾಗತಿಸಿದ್ದೇವೆ. ಈ ಅಧಿವೇಶನದಲ್ಲಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾಗಿರುವ ಚಂದ್ರೇಗೌಡರು ಫರ್ಸ್ಟ್ ಕ್ಲಾಸ್‌ನಲ್ಲಿ ಪಾಸಾಗಿದ್ದಾರೆ! ಅಧಿವೇಶನವನ್ನು 50 ದಿವಸಗಳ ಕಾಲ ನಡೆಸಿದ್ದರೆ ಅವರು ಸೆಕೆಂಡ್ ಕ್ಲಾಸ್‌ನಲ್ಲಿ ಪಾಸಾಗಿದ್ದಾರೆಂದು ಹೇಳಬಹುದಿತ್ತು. ಅಧಿವೇಶನ ನಡೆದಿರುವುದೇ 48 ದಿವಸಗಳಾಗಿರುವುದರಿಂದ ಅವರು ಫರ್ಸ್ಟ್ ಕ್ಲಾಸ್‌ನಲ್ಲಿ ಪಾಸಾಗಿದ್ದಾರೆಂದು ಹೇಳಬೇಕಾಗುತ್ತದೆ. ಈ ಅಧಿವೇಶನದಲ್ಲಿ ನಮಗೆ ಒಂದು ಕೊರತೆ ಕಂಡು ಬಂದದ್ದೇನೆಂದರೆ ಮಾನ್ಯ ಹಿರಿಯ ಮಂತ್ರಿಗಳೆಲ್ಲರೂ ನಮ್ಮನ್ನೆಲ್ಲಾ ವಿಶೇಷವಾಗಿ ಆಹ್ವಾನಿಸಿ ಊಟ ಹಾಕುತ್ತಾರೆಂದು ತಿಳಿದಿದ್ದೆವು. ನಾವು ಅಧಿಕಾರದಲ್ಲಿದ್ದಂಥ ಸಮಯದಲ್ಲಿ ಅಧಿವೇಶನವಿದ್ದಾಗ ಪ್ರತಿ ದಿವಸವೂ ಒಬ್ಬೊಬ್ಬ ಮಂತ್ರಿಗಳು ಊಟ ಹಾಕುತ್ತಿದ್ದೆವು. ಇವೊತ್ತು ಅಧಿವೇಶನದ ಕೊನೆಯ ದಿವಸವಾಗಿರುವುದರಿಂದ ತಮ್ಮ ಮಂತ್ರಿ ಮಂಡಲದಲ್ಲಿರುವ ಶ್ರೀಮತಿ ಸುಮಾ ಮಾಲಂತ, ಶ್ರೀ ಎಂ.ಸಿ. ನಾಣಯ್ಯ ಮತ್ತು ಶ್ರೀ ಜಾನ್‌ರವರು ನಮ್ಮನ್ನು ಕರೆದು ಊಟ ಹಾಕಿ ಉಪಚಾರವನ್ನಾದರೂ ಮಾಡಿದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಮ್ಮಿಂದ ಲೋಪವಾಗಿರುವುದಕ್ಕೆ ಕ್ಷಮಿಸಬೇಕು. ಅಧಿವೇಶನದ ಸಮಯದಲ್ಲಿ ಇನ್ನು ಮುಂದೆ ಊಟ ಹಾಕುವ ಕಾರ್ಯವನ್ನು ಮುಂದುವರೆಸುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಸಿಂಧ್ಯರವರೆ, ಕನಿಷ್ಟಪಕ್ಷ ಧಾರ್ಮಿಕ ಮತ್ತು ದತ್ತಿ ಸಚಿವರು ತೀರ್ಥ, ಪ್ರಸಾದವನ್ನಾದರೂ ಕೊಡಬಹುದಾಗಿತ್ತು.

(ಸದನದಲ್ಲಿ ನಗು)

ಶ್ರೀ ಪಿ.ಜಿ.ಆರ್. ಸಿಂಧ್ಯ :— ನಾನು ಎರಡನೇ ಬಾರಿಗೆ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಂಡಿದ್ದು, ಮೊದಲ ಬಾರಿ ಇತ್ತ ಕಡೆ ಕುಳಿತ್ತಿದ್ದಾಗ ಉಪ-ನಾಯಕನಾಗಿ ಕೆಲಸ ಮಾಡಿದ್ದೇನೆ. ಇತ್ತಕಡೆ ಬಂದು ಕುಳಿತುಕೊಳ್ಳುವುದಿದೆಯಲ್ಲ, ಅದು ಬಲು ಕಷ್ಟದ ಕೆಲಸ. ಹೊಸ ಜೇಳೆಯಲ್ಲಿ ವಿಷಯ ಪ್ರಸ್ತಾಪಿಸಲು ಅಧ್ಯಕ್ಷರಾದ ತಮ್ಮ ಮನಸ್ಸನ್ನು

ಒಲಿಸಿಕೊಳ್ಳುವುದಕ್ಕೆ ನಾವು ಸದನಕ್ಕೆ ಒಂದು ಗಂಟೆ ಮುಂಚಿತವಾಗಿಯೇ ಬರಬೇಕು, ಆದಾದ ಬಳಿಕ ನಾಳೆಯ ಕಲಾಪ ಏನೆಂದು ತಿಳಿದುಕೊಳ್ಳುವುದಕ್ಕೆ ಒಂದು ಗಂಟೆ ಹೆಚ್ಚಿಗೆ ಇರಬೇಕು ಹಾಗೂ ಸದನದ ನಾಳೆಯ ಕಲಾಪದ ಬಗ್ಗೆ ರಾತ್ರಿ ಹತ್ತು ಗಂಟೆಗೆ ನಮ್ಮ ಮನೆಗೆ ಏನೇನು ವಿವರಗಳನ್ನು ಕಳುಹಿಸುತ್ತೀರಿ, ಅದನ್ನೆಲ್ಲಾ ಓದಬೇಕು. ಇದು ನಮಗೆ ಕಷ್ಟವಾದ ಕೆಲಸವಾಗಿದೆ. ಇದನ್ನು ವಿರೋಧಪಕ್ಷದ ಅನೇಕ ಶಾಸಕರು ಹಾಗೂ ಮಾನ್ಯ ಸದಸ್ಯರಾದ ನೀಲಕಂಠಪ್ಪನವರು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಚರ್ಚೆಯೇ ಅತ್ಯಗತ್ಯವಾದುದು. ಚರ್ಚೆಯೇ ಇಲ್ಲದಿದ್ದರೆ ಪ್ರಜಾಪ್ರಭುತ್ವದಲ್ಲಿ ಇನ್ನೇನಿದೆ? ಇದಿಲ್ಲದಿದ್ದರೆ ಪ್ರಜಾಪ್ರಭುತ್ವಕ್ಕೆ ಅರ್ಥವೇ ಇರುವುದಿಲ್ಲ. ಸದನದಲ್ಲಾಗುವ ಚರ್ಚೆಯಲ್ಲಿ ನಾವು ಭಾಗವಹಿಸದಿದ್ದರೆ.... ನಿಮಗೆ ಬಹುಮತವಿದೆಯೆನ್ನುವ ಕಾರಣಕ್ಕಾಗಿ ಯಾವುದೇ ಮಸೂದೆ, ನಿರ್ಣಯವನ್ನು ಅಂಗೀಕರಿಸಿಕೊಳ್ಳಬಹುದೆಂದು ನಮಗೂ ಗೊತ್ತಿದೆ. ಅಧಿವೇಶನ ನಡೆಯುತ್ತಿದ್ದ ಈ ಸಮಯದಲ್ಲಿ ಮಂತ್ರಿಗಳು ನಮಗೆ ಏಕೆ ಊಟ ಹಾಕಲಿಲ್ಲವೋ ಗೊತ್ತಿಲ್ಲ. ಶಾಸಕರುಗಳಾದ ನಮಗೆ ಮಧ್ಯಾಹ್ನದ ಹೊತ್ತಿನ ಊಟದ ವ್ಯವಸ್ಥೆ ಸರಿಯಿಲ್ಲ. ಈ ಬಗ್ಗೆ ಕ್ಯಾಂಟೀನ್ ನಡೆಸುತ್ತಿರುವವರನ್ನು ನಾನು ಕೇಳಿದಾಗ ಅವರು "ಸ್ವಾಮಿ ಕ್ಯಾಂಟೀನ್ ನಡೆಸುವುದರಿಂದ ನನಗೇನೂ ಲಾಭವಾಗುವುದಿಲ್ಲ, ಇಲ್ಲಿ ಬಹಳಷ್ಟು ಪ್ಲೇಟು, ಲೋಟಗಳು ಕಳ್ಳತನವಾಗುತ್ತಿವೆ!" ಎಂದರು. ಇದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಮುಂದಿನ ಅಧಿವೇಶನದ ಸಂದರ್ಭದಲ್ಲಾದರೂ ತಾವು ಇತ್ತಕಡೆ ಗಮನಹರಿಸಬೇಕು. ಇನ್ನು ಸದನದ ಕಲಾಪವನ್ನು ಪತ್ರಿಕೆಗಳ ಮೂಲಕ ವರದಿ ಮಾಡುವ ಪತ್ರಕರ್ತರು ಕಲಾಪ ನಡೆಯುವವರೆಗೂ ಇದ್ದು ನಂತರ ತಂತಮ್ಮ ಪತ್ರಿಕೆಗಳಿಗೆ ವರದಿ ಮಾಡಿ ಮನೆಗೆ ಹೋಗುವಷ್ಟರಲ್ಲಿ ರಾತ್ರಿ 12 ಗಂಟೆಯಾಗಿರುತ್ತದೆ. ಪುನ: ಬೆಳಿಗ್ಗೆ 9 ಗಂಟೆಗೆ ಅವರು ತಯಾರಾಗಿ ಇಲ್ಲಿರಬೇಕಾಗುತ್ತದಾದ್ದರಿಂದ ನಾವೆಲ್ಲರೂ ಅವರಿಗೆ ವಿಶೇಷವಾಗಿ ಧನ್ಯವಾದಗಳನ್ನರ್ಪಿಸಬೇಕು. ನಿಜವಾಗಿಯೂ ಸರ್ಕಾರ ಅನೇಕ ತಪ್ಪುಗಳನ್ನು ಮಾಡಿದೆ. ಆದರೆ, ಅನೇಕ ವಿಚಾರಗಳನ್ನು ಈ ಅಧಿವೇಶನದಲ್ಲಿ ಚರ್ಚಿಸುವುದಕ್ಕಾಗಲಿಲ್ಲ. ನಮ್ಮೊಂದಿಗೆ ಅನೇಕ ವಿಚಾರಗಳಲ್ಲಿ ಸಹಮತ ವ್ಯಕ್ತಪಡಿಸುವಂಥ ಹೊಸ ಅಧ್ಯಾಯವೊಂದನ್ನು ತಾವು ಕರ್ನಾಟಕದಲ್ಲಿ ಪ್ರಾರಂಭಿಸಿದ್ದೀರಿ. ಇದು ಈ ಮಟ್ಟದಲ್ಲಿ ಮಾತ್ರ ಇರದೇ ಕ್ಷೇತ್ರ ಮತ್ತುಜನತೆಯ ಮಟ್ಟದಲ್ಲಾಗಬೇಕೆಂದು ಅತ್ಯಂತ ಕಳಕಳಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಹಾಗೆಯೇ ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, ಸಂತೇಮಾರಹಳ್ಳಿ ಕ್ಷೇತ್ರದ ಶಾಸಕರಾದ ಕೃಷ್ಣಮೂರ್ತಿ ಮತ್ತು ಚಾಮರಾಜನಗರ ಕ್ಷೇತ್ರದ ಶಾಸಕರಾದ ಗುರುಸ್ವಾಮಿಯವರು ಬಹಳ ನೋವು ಹೊತ್ತುಕೊಂಡು ಈ ಸದನದಿಂದ ಹೋಗುತ್ತಿರುವುದರಿಂದ ಮಾನ್ಯ ಗೃಹಮಂತ್ರಿಗಳು ಅವರಿಬ್ಬರನ್ನೂ ಕರೆಸಿ ಅವರಿಗಾಗಿರುವ ಅವಮಾನಕ್ಕೆ ಸಂಬಂಧಿಸಿದವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು. ಕೆಳಮಟ್ಟದಲ್ಲಿರುವ ಯಾರೇ ಅಧಿಕಾರಿಗಳು ಸಹ ಅಂತಹ

ದುರ್ನಡತೆಗೆ ಹೋಗುವುದಿಲ್ಲ, ಅವರಿಗೆ ಯಾರದೋ ಬೆಂಬಲವಿರುತ್ತದೆ. ಆ ಬೆಂಬಲವನ್ನು ನೀವು ಕಡಿದು ಹಾಕಿದರೆ ತಂತಾನೇ ಅವರು ಸರಿಹೋಗುತ್ತಾರೆ. ರಾಜ್ಯದ ರೈತರ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಒಂದು ಭರವಸೆ ಕೊಟ್ಟಿರುವುದು ನಮಗೆ ಬಹಳ ಸಂತೋಷವಾಯಿತು. ರೈತರ ಬಗ್ಗೆ ಮಾತನಾಡುತ್ತಾ ಮಂತ್ರಿಗಳ ನಾಯಕತ್ವದಲ್ಲಿ ಕೇಂದ್ರ ಸರ್ಕಾರಕ್ಕೆ ಹೊಗುವುದು ಇದ್ದೇ ಇದೆ, ಮುಖ್ಯಮಂತ್ರಿಗಳಾದ ತಾವು ಬರಬೇಕೆಂದು ಸಲಹೆಯಿತ್ತಾಗ ಹಾಗೂ ಇದರ ಬಗ್ಗೆ ವಿರೋಧಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್ ಅವರೂ ಸಹ ಸಲಹೆ ಕೊಟ್ಟಾಗ ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ಒಪ್ಪಿಕೊಂಡರು. ನಾವೆಲ್ಲರೂ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ದೆಹಲಿಗೆ ಹೋಗುತ್ತಿರುವುದರಿಂದ ಏನಾಗುತ್ತದೆಂದು ನೋಡೋಣ. ಆ ದಿಸೆಯಲ್ಲಿ ಕರ್ನಾಟಕದ ಪ್ರಗತಿಯ ದೃಷ್ಟಿಯಿಂದ ಈ ಅಧಿವೇಶನ ಉತ್ತಮವಾಗಿ ಕಾರ್ಯನಿರ್ವಹಿಸಿದೆ. ಅದುದರಿಂದ, ಇದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ, ಮಂತ್ರಿಗಳಿಗೆ ಹಾಗೂ ಸದನದ ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೆ ಅಭಿನಂದನೆ ಹೇಳಿ, ಇದರ ಸಂಪೂರ್ಣ ಕೀರ್ತಿ ಮಾನ್ಯ ಅಧ್ಯಕ್ಷರಾದ ತಮಗೇ ಸಲ್ಲಬೇಕೆಂದು ತಿಳಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

ಅಧ್ಯಕ್ಷರು :— ಈಗ ನಾನು ಮತ್ತೊಮ್ಮೆ ಎಲ್ಲಾ ಮಾನ್ಯ ಸದಸ್ಯರಿಗೂ 2001ನೇ ಇಸವಿಯ ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತಾ ಈ ಸದನವನ್ನು ಅನಿರ್ದಿಷ್ಟ ಅವಧಿಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ರಾತ್ರಿ 7 ಗಂಟೆ 5 ನಿಮಿಷಕ್ಕೆ ಮುಕ್ತಾಯಗೊಂಡು ಅನಿರ್ದಿಷ್ಟ ಅವಧಿಯವರೆಗೆ ಮುಂದೂಡಲಾಯಿತು)

+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಸರಿಪಡಿಸಿಲ್ಲ ಎಂದು ಸೂಚಿಸುತ್ತದೆ.